ಅಂದುಕೊಳ್ಳುವಾಗ ಉಗುಳು ನುಂಗಿಕೊಳ್ಳುವಂತಾಗುತ್ತದೆ ಯಶೋದಮ್ಮನಿಗೆ. ಅನುಭವಿಸುವ ವಯಸ್ಸು, ಹುಮ್ಮಸ್ಸು ಇರುವಾಗ ಅನುಭವಿಸುವ ಅದೃಷ್ಟ ಇರಬೇಕಪ್ಪಾ. ವಯಸ್ಸು ಮಾಗಿದ ಮೇಲೆ ಮಗು ಹುಟ್ಟಿದರೆ ಅದು ಬೆಳೆದು ದೊಡ್ಡದಾಗಿ ತನ್ನ ಭವಿಷ್ಯ ಕಟ್ಟಿಕೊಳ್ಳುವವರೆಗೆ ದೇವರು ಆಯುಷ್ಯ, ಆರೋಗ್ಯ ಕೊಟ್ಟಿರಬೇಕಲ್ಲ? ನಮ್ಮ ಅತ್ಯಾಸೆಗೆ ಮುಗ್ಧ ಮಗುವಿನ ಭವಿಷ್ಯ ಅತಂತ್ರವಾಗುವುದು ಯಶೋದಮ್ಮನಿಗೆ ಒಪ್ಪಿತವಾಗುವಂತಾದ್ದೇನಲ್ಲ. ಇವರು ನಡುನೀರಲ್ಲಿ ಕೈ ಬಿಟ್ಟು ನಡೆದರೆ ಎಳೆವಯಸ್ಸಿನ ಮಗುವಿಗೆ ಯಾರು ಗತಿ? ಆಸ್ತಿಪಾಸ್ತಿ ಇದ್ದರೆ ಅದು ಬೆಳೆದು ದೊಡ್ಡದಾಗುವುದರಲ್ಲಿ ಪಾಲಕತ್ವ ವಹಿಸಿಕೊಂಡವರು ಹಾಗೇ ಉಳಿಸಿರುತ್ತಾರೆಯೇ? ಏನೋಪ್ಪ, ಒಂದೊಂದಲ್ಲಾ ಚಿಂತೆ. 'ಮಗನಿಗೆ ಬೇಗ ಒಂದು ಮಗು ಆಗಿಬಿಡಬೇಕು. ಬೇಗ ಒಂದು ಮಗು ಹುಟ್ಟಿಬಿಡಬೇಕು' ಹಗಲೂರಾತ್ರಿ ಇದೊಂದೇ ಜಪ. ಇದೊಂದೇ ಕನವರಿಕೆ. ಮನೆಯಂಗಳದಲ್ಲಿ ಆಡುವ ನಾಯಿಮರಿಗಳನ್ನು ಕಂಡರೆ, ಕೊಟ್ಟಿಗೆ ತುಂಬಾ ಎಗರಾಡುವ ಎಳೆಗರುವನ್ನು ನೋಡಿದರೆ, ಕೊನೆಗೆ ಎದೆ ಎದುರು ಬರುವಂತೆ ಜೋಳಿಗೆ ಕಟ್ಟಿಕೊಂಡು, ಅದರೊಳಗೆ ಪಿಳಿಪಿಳಿ ಕಣ್ಣು ಬಿಡುವ ಎಳೆಕಂದನನ್ನು ಅವುಚಿಕೊಂಡು, ತಿರಿಯಲು ಬರುವ ಭಿಕ್ಷುಕಿಯರನ್ನು ಕಂಡಾಗಲೂ ಹೊಟ್ಟೆಗೆ ಚೂರಿ ಹಾಕಿದಂತಾಗುತ್ತದೆ. ನನ್ನ ಸೊಸೆಗೆ ಇಂತಾ ಯೋಗ ಯಾಕಿಲ್ಲ? 'ನಿನ್ನ ಸೊಸೆಗೆ ಮಾತ್ರಾ ಅಂತಲ್ಲ, ಇಂತೋರು ಬೇಕಾದಷ್ಟು ಜನ ಇದಾರೆ. ಮಕ್ಕಳು ಹುಟ್ಟಿದ ಕೂಡಲೆ ಮನೆ ಉದ್ಧಾರ

